# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1040 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು); | ರಾಜ್ಯದಲ್ಲಿ ಜುಲೈ 2020 ರಿಂದ ಎಸ್.ಎಂ.ಎಂ.ಇ ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದೆ. ಭಾರತ ಸರ್ಕಾರದ ಉದ್ಯಮ್ ತಂತಾಂಶದಲ್ಲಿ ದಿನಾಂಕ: 27.11.2025 ರ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 24.15 ಲಕ್ಷ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು ನೋಂದಣಿಯಾಗಿರುತ್ತವೆ. ಅವುಗಳ ಪೈಕಿ 23,83,812 ಸೂಕ್ಷ್ಮ ಮತ್ತು 31,346 ಸಣ್ಣ ಉದ್ಯಮಗಳು ನೊಂದಣಿಯಾಗಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ವಿಶೇಷವಾಗಿ ಚನ್ನಪಟ್ಟಣ ಆಟಿಕೆಗಳು / ಇಳಕಲ್ ಸೀರೆಯಂತಹ ಸ್ಥಳೀಯ ಕರಕುಶಲ ವಸ್ತುಗಳನ್ನು ತಯಾರಿಸುವ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಚನ್ನಪಟ್ಟಣ ಆಟಿಕೆಗಳು ಹಾಗೂ ಕರಕುಶಲ ವಸ್ತುಗಳನ್ನು ತಯಾರಿಸಿ ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ಹಾಗೂ ಸ್ಥಳಿಯರಿಗೆ ಉದ್ಯೋಗಾವಕಾಶ ಸೃಷ್ಟಿಸಿ ಕರಕುಶಲ ಕರ್ಮಿಗಳನ್ನು ಉತ್ತೇಜಿಸಲು ಕೇವಲ ಕರಕುಶಲ ವಸ್ತುಗಳ ತಯಾರಿಕೆಗಾಗಿ ಚನ್ನಪಟ್ಟಣ ತಾಲ್ಲೂಕಿನ ತಗಚಗೆರೆಯಲ್ಲಿ ಸುಮಾರು 14-27 ಎಕರೆ ವಿಸ್ತೀರ್ಣದಲ್ಲಿ ಪ್ರತ್ಯೇಕ ವಸಾಹತುವನ್ನು 2009-10ನೇ ಸಾಲಿನಲ್ಲಿ ಸ್ಥಾಪಿಸಲಾಗಿರುತ್ತದೆ. ಸದರಿ ಕೈಗಾರಿಕಾ ವಸಾಹತುವಿನಲ್ಲಿ ಕರಕುಶಲ ಚಟುವಟಿಕೆಗಳು ಪ್ರಗತಿಯಲ್ಲಿವೆ.<br><br>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ಅರಗು ಬಣ್ಣದ ಕಲಾ ಸಂಕೀರ್ಣ ಹಾಗೂ ಚನ್ನಪಟ್ಟಣದ ವ್ಯಾಪ್ತಿಯಲ್ಲಿ ನಿಗಮದಲ್ಲಿ ನೊಂದಾಯಿತ ಕರಕುಶಲಕರ್ಮಿಗಳು ತಯಾರಿಸಿದ ಚನ್ನಪಟ್ಟಣ ಆಟಿಕೆಗಳನ್ನು ಖರೀದಿಸಿ, ನಿಗಮದ ಕಾವೇರಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |
| ಇ) | ಇವುಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆಯೇ; | ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ನಿಗಮದ ಕಾರ್ಯವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣದ ಆಟಿಕೆಗಳಿಗೆ ಭೌಗೋಳಿಕ ಗುರುತಿನ ಪ್ರಮಾಣ ಪತ್ರ (GI Tag) ವನ್ನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ ಪಡೆಯಲಾಗಿರುತ್ತದೆ. |
| ಈ) | ಶ್ರೀಗಂಧದಲ್ಲಿ ಮಾಡುವ ಕರಕುಶಲಗಳು ಮತ್ತು ಬೀಟೆ ಮರಗಳ ಕರಕುಶಲಗಳು ತಯಾರಿಸುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಕೈಗೊಂಡಿರುವ ಉತ್ತೇಜನವೇನು? | ರಾಜ್ಯ ಸರ್ಕಾರದ ಕರಕುಶಲ ಕಲೆಗೆ ಬೆಂಬಲ ಯೋಜನೆಯಡಿಯಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ, ನಿಗಮವು ಶೇ.50 ರ ರಿಯಾಯಿತಿ ದರದಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನೊಂದಾಯಿತ ಶ್ರೀಗಂಧ ಕರಕುಶಲಕರ್ಮಿಗಳಿಗೆ ಶ್ರೀಗಂಧದ ಕಚ್ಚಾಮಾಲನ್ನು ವಿತರಿಸಲಾಗುತ್ತಿದೆ ಹಾಗೂ ನಿಗಮದ ಕಲಾ ಸಂಕೀರ್ಣಗಳಿಂದ ಶ್ರೀಗಂಧ ನೊಂದಾಯಿತ ಕರಕುಶಲಕರ್ಮಿಗಳು ತಯಾರಿಸುವ ಶ್ರೀಗಂಧದ ಕಲಾಕೃತಿಗಳನ್ನು ಖರೀದಿಸಿ, ನಿಗಮದ ಕಾವೇರಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಿ, ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>ನಿಗಮದ ಬಹು ಕಲಾ ಸಂಕೀರ್ಣ, ಮೈಸೂರಿನ ನೋಂದಾಯಿತ |

| | | |
|---|---|---|
| | | ಕರಕುಶಲಕರ್ಮಿಗಳು ತಯಾರಿಸಿದ ಬೀಟೆ ಮರದ ಕಲಾಕೃತಿಗಳನ್ನು ಖರೀದಿಸಿ, ನಿಗಮದ ಕಾವೇರಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಿ, ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. |

**ಸಿಐ 352 ಸಿಎಸ್‌ಸಿ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಪ್ರಶ್ನೆ ಸಂಖ್ಯೆ - 1003 (1040) ಕ್ಕೆ ಅನುಬಂಧ

| District wise MSME Registration in Govt of India Udyam Portal (From July 2020 to 27.11.2025) | | | |
|---|---|---|---|
| **District Name** | **Micro** | **Small** | **Grand Total** |
| BAGALKOT | 56283 | 353 | 56636 |
| BALLARI | 54961 | 912 | 55873 |
| BELAGAVI | 165184 | 1149 | 166333 |
| BENGALURU (RURAL) | 111269 | 1521 | 112790 |
| BENGALURU (URBAN) | 602372 | 13911 | 616283 |
| BIDAR | 45153 | 331 | 45484 |
| CHAMARAJNAGAR | 25981 | 162 | 26143 |
| CHIKBALLAPUR | 42156 | 314 | 42470 |
| CHIKKAMAGALURU | 37387 | 375 | 37762 |
| CHITRADURGA | 45179 | 359 | 45538 |
| DAKSHIN KANNAD | 92324 | 1211 | 93535 |
| DAVANGERE | 61995 | 566 | 62561 |
| DHARWAD | 87824 | 937 | 88761 |
| GADAG | 32010 | 221 | 32231 |
| HASSAN | 62228 | 672 | 62900 |
| HAVERI | 49977 | 399 | 50376 |
| KALABURAGI | 58591 | 635 | 59226 |
| KODAGU | 19645 | 239 | 19884 |
| KOLAR | 50021 | 494 | 50515 |
| KOPPAL | 33770 | 478 | 34248 |
| MANDYA | 55555 | 421 | 55976 |
| MYSURU | 133122 | 1291 | 134413 |
| RAICHUR | 43642 | 716 | 44358 |
| RAMANAGARA | 42913 | 340 | 43253 |
| SHIVAMOGGA | 66402 | 610 | 67012 |
| TUMAKURU | 92619 | 873 | 93492 |
| UDUPI | 54686 | 612 | 55298 |
| UTTAR KANNADA | 51612 | 307 | 51919 |
| VIJAYANAGAR | 26156 | 232 | 26388 |
| VIJAYAPURA | 58252 | 508 | 58760 |
| YADGIR | 24543 | 197 | 24740 |
| **Grand Total** | **2383812** | **31346** | **2415158** |